ESTD: 1919 ಸ್ಥಾಪನೆ

Registered No. M. 4468

ಚಂದಾ ದರ
ಸ್ಥಳೀಯರಿಗೆ 4–8–0
ಪರಸ್ಥಳೀಯರಿಗೆ 6–2–0
ಬಿಡಿ ಸಂಚಿಕೆ:
ಮಂಗಳವಾರ 0–1–6
ಶುಕ್ರವಾರ 0–0–6
ಕಾರ್ಯಾಲಯ
ರಥಬೀದಿ, ಮಂಗಳೂರು

# ಕಂಠೀರವ

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಜೂನ್ ತಾ. ೭ನೇ ಶುಕ್ರವಾರ [ಸಂಚಿಕೆ ೨೦
VOL·XXVIII} MANGALORE, FRIDAY 7. JUNE, 1946 [NO. 20

Work Executed by Skilled Artists
Oil Paintings
Commercial Drawings
Cinema Slides
Etc. Etc.
Shevgoor Fine Arts
CAR ST. MANGALORE.

ಆಹಾರ ಸಾಮಗ್ರಿಗಳ ಕುರಿತು

## ಸರಕಾರದ ಪ್ರಕಟಣೆ

೧೯೪೬ನೇ ಮಾರ್ಚಿಯಲ್ಲಿ ಸರಕಾರದ ವರು, ಇಂಡಿಯಾ ರಕ್ಷಣೆಯ ಕಾನೂನಿನ ಅನ್ವಯ ಪಾನೀಯಗಳ ಹೊರತಾಗಿ—೩೦ ಮಂದಿಗಿಂತ ಹೆಚ್ಚಾದವರಿಗೆ (ಮದುವೆ ಸಮಾರಂಭದ ಎನಹ) ಅನ್ನಾಹಾರ ತಿಂಡಿ ಇತ್ಯಾದಿಗಳನ್ನು ಬಡಿಸುವ ವಿಚಾರದಲ್ಲಿ ನಿರ್ಬಂಧಗಳನ್ನು ಕಲ್ಪಿಸಿ, ಆ ನಿಯಮಗಳನ್ನು ಎಂದಿ ನಡೆಯುವುದು ಅಪರಾಧ. ವೆಂದೂ ಶಿಕ್ಷಾರ್ಹವೆಂದೂ ಪ್ರಕಟಿಸಿದ್ದರು. ಅನಂತರ ಈ ಆಪ್ಪಣೆಗಳ ಕುರಿತಾಗಿ ಹಲವು ಸಂದೇಹಗಳುಂಟಾಗಿರುವುದರಿಂದ ಆ ಸಂದೇಹನಿವೃತ್ತಿಗಾಗಿ ಸರಕಾರದವರು ಇದೇ ಹೊಸದೊಂದು ಪ್ರಕಟಣೆಯನ್ನು ಕಳೆದ ಮೇ ತಾ. ೨೯ರಲ್ಲಿ ಹೊರಡಿಸಿರುತ್ತಾರೆ. ಆ ಪ್ರಕಟಣೆಯಲ್ಲಿ "ಪಾರ್ಟಿ" ಅಥವಾ ಕೂಟವೆಂದರೆ "ನಿತ್ಯಾನ್ನ"ಕ್ಕೆ ಎರೋಧವಾದ "ಸತ್ಕಾರ" "ಉಪಚಾರ" ವೆನ್ನಲಾಗಿದೆ. ಇದು ಅನ್ವಯಿಸದಿರುವ ಬಾಬುಗಳು ಯಾವುವೆಂದರೆ:—

೧ ದೇವಸ್ಥಾನಗಳ ದೇವರಿಗೆ ಸಮರ್ಪಿಸಿದ ಪ್ರಸಾದಗಳ ಅಲ್ಪ ಸ್ವಲ್ಪ ಪ್ರಮಾಣವನ್ನು ಭಕ್ತಾದಿಗಳಿಗೆ ಹಂಚುವುದು ಅಂಥ ಸಂದರ್ಭದಲ್ಲಿ ಅದನ್ನು "ಕೂಟ"ವೆಂಬ ಹೆಸರಲ್ಲಿ ಕರೆಯಲಾಗುವುದಿಲ್ಲ ಅಲ್ಲದೆ ಪ್ರಸಾದವನ್ನೂ, ಸಾಮಾನ್ಯ ಅರ್ಥದಲ್ಲಿ ಆಹಾರವೆಂದೂ ಭಾವಿಸಲಾಗುವುದಿಲ್ಲ. ಈ ಉದ್ದೇಶಕ್ಕಾಗಿ ಉಪಯೋಗವಾಗುವ ಆಹಾರವ ಪ್ರಮಾಣವೂ ಸ್ವಲ್ಪ; ಹಾಗಾಗಿ ದೊಡ್ಡ ಸಮಾರಾಧನೆಯಲ್ಲಿ ಆಗುವ ರೀತಿಯ ಅನ್ನ ಸಾಮಗ್ರಿಗಳ ದುರ್ವ್ಯಯವೇನೂ ಇಲ್ಲಿ ಉಂಟಾಗುವ ಸಂಭವವಿಲ್ಲ.

೨ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಚಿತ ಭೋಜನದ ಏರ್ಪಾಡು.

೩ ನಿತ್ಯವೂ ಬಡಬಗ್ಗರಿಗಾಗಿ ಅನ್ನದಾನ ನಡೆಯುವ ಛತ್ರಗಳು ಧರ್ಮಶಾಲೆಗಳು, ಮಠಗಳು, ಅನ್ನದಾನ ಸಮಾಜಗಳೇ ಮುಂತಾದವು.

೪ ದೇವಸ್ಥಾನ ಮತ್ತಿತರ ಧಾರ್ಮಿಕ ಸಂಸ್ಥೆಗಳಲ್ಲಿ ಯಾತ್ರಿಕರು, ಭಕ್ತಾದಿಗಳು, ಮತ್ತು ದೇಶಾಟನ ಮಾಡುವ ಯಾತ್ರಿಕರು ಕೂಡ ೩೦ ಮಂದಿಗೆ ಹೆಚ್ಚಿಗೆಯಾದವರಿಗೆ ಅನ್ನ ಕೊಡಕೂಡದೆಂದು ಸರಕಾರವು ಪ್ರತ್ಯೇಕವಾಗಿ ಆಪ್ಪಣೆ ಮಾಡಿದೆ.

೫ ಎಲ್ಲಿ ಡೆಲಿಗೇಟರು ಭೋಜನದ ಉದ್ದೇಶಕ್ಕಾಗಿ ಮಾತ್ರವೇ ಇರುವರೋ ಅಂಥ ಕಾನ್ಫರೆನ್ಸ್ ಮತ್ತು ಪಾರ್ಟಿ ಎಂಬ ಟಂಗುಗಳ ಊಟದ ಏರ್ಪಾಡುಗಳಿಗೆ ಈ ಆಪ್ಪಣೆ ಲಗಾವಾಗುವುದಿಲ್ಲ, ಈ ಸಂಬಂಧ ಜಿಲ್ಲಾ ಕಲೆಕ್ಟರರು,—ಸರಿಯಾದ ಕಾರಣ ಎದ್ದ ಎನ್ನಾ,—ನಿರ್ಧರಿಸಿದ ಪ್ರಮಾಣದಲ್ಲಿ ರೇಶನ್ ಕೊಡಲು ಅಧಿಕಾರ ಹೊಂದಿದವರಾಗಿರುತ್ತಾರೆ. ಈ ಸಂದರ್ಭದಲ್ಲಿ ಆ ಊಟದ ವ್ಯವಸ್ಥೆಯ ವ ವಸ್ಥಾಪಕ ಅಥವಾ ವ್ಯವಸ್ಥಾಪಕರು ಹಾಗೆ ಊರವರ ಹೆಸರಿನ ಮತ್ತು ಆ ಸಂಬಂಧದ ಲೆಕ್ಕ ಪತ್ರಗಳ ಗಳ ರಿಜಿಸ್ಟರ್ ಒಂದನ್ನು ಸರಿಯಾಗಿ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ.

### ದ. ಕ. ಜಿಲ್ಲಾ ಬಟ್ಟೆ ವ್ಯಾಪಾರಿಗಳ ಸಂಘ

ಕಳೆದ ತಾ. ೨೮ರಲ್ಲಿ ಶೇಟ್ ಪಿಠಲ್ಜಿ ಮಾಧವಜಿಯವರ ರಖಂ ವಸ್ತ್ರ ವ್ಯಾಪಾರದ ಕಾರ್ಯಾಲಯದ ಮಾಳಿಗೆಯಲ್ಲಿ ಈ ಜಿಲ್ಲೆಯ ಬಟ್ಟೆ ವ್ಯಾಪಾರಿಗಳದೊಂದು ಸಭೆ ನವ್ಯ "ಟೆಕ್ಸ್‌ಟೈಲ್ ಕಂಟ್ರೋಲ್ ಆಫೀಸರ್" ಎಂ. ಎಫ್. ಪಿಂಟೋರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಜಿಲ್ಲೆಯಲ್ಲಿ ಒಂದು ಜಿಲ್ಲಾ ಬಟ್ಟೆ ವ್ಯಾಪಾರಿಗಳದೊಂದು ಸಂಘವನ್ನು ಸ್ಥಾಪಿಸುವ ಆವಶ್ಯಕತೆಯ ಕುರಿತಾಗಿ ಬಹಳ ಚರ್ಚೆ ನಡೆಯಿತು. ದ. ಕ. ಜಿಲ್ಲಾ ವಾಣಿಜ್ಯ ಸಂಘದ ಕಾರ್ಯದರ್ಶಿ ಶ್ರೀ. ಕೆ. ಕೇಶವ ಶೆಣೈಯವರು "ಆಗಲೇ ಹಲವು ಮಂದಿ ಬಟ್ಟೆ ವ್ಯಾಪಾರಿಗಳು ವಾಣಿಜ್ಯ ಸಂಘದ ಸದಸ್ಯರುಗಳಾಗಿದ್ದಾರೆ. ಅಂತೆ ಇದರ ಮೆಂಬರರಲ್ಲದ ಇತರ ಬಟ್ಟೆ ವ್ಯಾಪಾರಿಗಳೂ ಅದೇ ವಾಣಿಜ್ಯ ಸಂಘದ ಮೆಂಬರರಾದಲ್ಲಿ ಆ ಸಂಘ ವಾಣಿಜ್ಯ ಸಂಘದ ಕಾರ್ಯಾಲಯದಲ್ಲೇ ಕಡಿಮೆ ಖರ್ಚಿನಲ್ಲಿ ನಡೆಯಬಹುದಾಗಿದೆಯಾಗಿ ಬಟ್ಟೆ ವ್ಯಾಪಾರಿಗಳಿಗೊಂದು ಪ್ರತ್ಯೇಕ ಜಿಲ್ಲಾ ಸಂಘ ಅಗತ್ಯವಿಲ್ಲ" ಎಂದರು. ಶ್ರೀ। ಐ. ಎ. ರಾಮರಾವ್—ಲಿಬರ್ಟಿ ಸ್ಟೋರ್ಸಿನ ಮೆನೆಜರ್—ಅವರು ಈ ಅಭಿಪ್ರಾಯವನ್ನೇ ಸಮರ್ಥಿಸಿದರು. ಆದರೆ ಈ ಅಭಿಪ್ರಾಯವನ್ನು ಶ್ರೀ। ಆರ್. ಬಿ. ವಸಂತರು ಪ್ರಬಲವಾಗಿ ಎರೋಧಿಸಿದರು. ಅಧ್ಯಕ್ಷರೂ ಈ ವಿಷಯದಲ್ಲಿನ ತಮ್ಮ ಹಿತ ಸೂಚನೆಗಳನ್ನು ಕೊಟ್ಟರು.

ಈ ವಿಚಾರದಲ್ಲಿ ಈ ಜಿಲ್ಲೆಗೊಂದು ಪ್ರತ್ಯೇಕ ಬಟ್ಟೆ ವ್ಯಾಪಾರಿಗಳ ಸಂಘವೇ ಬೇಕೆಂದು ಬಹುಮತದಿಂದ ತೀರ್ಮಾನವಾಗಿದೆ. ೩೬ ಮಂದಿ ಸದಸ್ಯರುಗಳನ್ನೊಳಗೊಂಡ ಒಂದು ತಾತ್ಕಾಲಿಕ ಸಮಿತಿಯೂ ರಚನೆಯಾಗಿದೆ.

### ಬೇಸಿಗ ರಜೆ ಮುಗಿಯಿತು

ಹೈಸ್ಕೂಲುಗಳಿಗೂ ಮುನಿ ಕೋರ್ಟು ಗಳಿಗೂ ಬೇಸಿಗೆ ರಜೆ ಮುಗಿದು ಅವು ತೆರೆಯಲ್ಪಟ್ಟವೆ. ಕಾಲೇಜುಗಳು ಬೇಗನೆ ತೆರೆಯಲ್ಪಡಲಿವೆ. ಜಿಲ್ಲಾ ಜಡ್ಜರ ಮತ್ತು ಸಬ್ ಜಡ್ಜರ ಕೋರ್ಟುಗಳು ಇನ್ನೆರಡು ವಾರಗಳಲ್ಲಿ ಆರಂಭವಾಗುವುವು.

### ಮಳೆ

ಕಳೆದ ೨—೩—೪ರಲ್ಲಿ ಇಲ್ಲಿ ಬಂದಿದ್ದ ಮಳೆ ಈಗ ಎರಡು ದಿನಗಳಿಂದ ಕೊಂಚ ಕಡಿಮೆಯಾಗಿದೆ.

### ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

ಈ ಆಧಿಪತ್ಯದಲ್ಲಿ, ಈ ಜಿಲ್ಲೆಯಲ್ಲಿಯೂ ಸ್ಥಳೀಯ ಸಂಸ್ಥೆಗಳ ಹೊಸ ಚುನಾವಣೆಗಳು ನಡೆಯಲಿವೆ. ಪ್ರಾಯಶಃ ಮುನ್ಸಿಪಲ್ ಕೌನ್ಸಿಲುಗಳ ಹೊಸ ಚುನಾವಣೆ ಬರುವ ಅಗೊಸ್ತಿನಲ್ಲಿಯೂ ಜಿಲ್ಲಾ ಬೋರ್ಡುಗಳ ಚುನಾವಣೆ ಸೆಪ್ಟೆಂಬರದಲ್ಲಿಯೂ ನಡೆಯಬಹುದು. ಈಗಿನ ವ್ಯವಸ್ಥೆಯಂತೆ ಈ ಸ್ಥಳೀಯ ಸಂಸ್ಥೆಗಳ ಓಟರರ ಪಟ್ಟಿ ಇದ್ದೇ ಜುಲ್ಯೈ ಎರಡನೇ ವಾರದೊಳಗೆ ತಯಾರಿಸಬೇಕಾಗಿದೆ.

### ಕಾಸರಗೋಡಿಗೆ ಗೊಬ್ಬರದ ದಾನ

ಕಾಸರಗೋಡು ತಾಲೂಕಿಗೆ ಸರಕಾರದವರು ಉಚಿತವಾಗಿ ಗೊಬ್ಬರ ಹಂಚುವ ಏರ್ಪಾಡು ಮಾಡಿದ್ದಾರೆ. ಈ ತಾಲೂಕಿನಲ್ಲಿ ಬತ್ತ ಬೆಳೆಯುವ ಎಕ್ಕರೆ ೬೫ ಸಾವಿರ; ಇವುಗಳಲ್ಲಿ ಸಾಮಾನ್ಯವಾಗಿ ಬೆಳೆಯುವ ಬತ್ತ ೫೨ ಸಾವಿರ ಟನ್. ಈಗ ಈ ತಾಲೂಕಿನ ಪ್ರತಿ ಎಕ್ರೆ ೧ ೨೨೪ ಪೌಂಡುಗಳಷ್ಟು ನೆಲಗಡಲೆ ಹಿಂಡಿಯೂ ೫೬

ಪೌಂಡು ಅಮ್ಮೋನಿಯಾ ಸಲ್ಫೇಟೂ ಗೊಬ್ಬರವಾಗಿ ಹಂಚಲು ನಿರ್ಧಾರ. ಇದರಿಂದ ಆ ತಾಲೂಕಿನಲ್ಲಿ ೭೮ರಿಂ ಟನ್ನುಗಳಷ್ಟು ಬತ್ತ ಹೆಚ್ಚಾಗಿ ಬೆಳೆಯಬಹುದೆಂದು ನಿರೀಕ್ಷೆ.

### ಕಾಫಿ ಬೋರ್ಡಿನವರ ರೆಸ್ಟೋರೆಂಟ್?

ಮಂಗಳೂರಿನ ಮುನ್ಸಿಪಲ್ ಕೌನ್ಸಿಲ್ ಮಂಗಳೂರಿನ ಗುಳಿಗ ಹಿತ್ಲಿನಲ್ಲಿ ರೆಸ್ಟೋರೆಂಟಿಗಾಗಿ ಎಂಪಲಾಗಿಸಿದ ಸ್ಥಳದಲ್ಲಿ—ಬಸ್ ಆಫೀಸಿನ ಸಮೀಪ—ಕಾಫಿ ಮಾರ್ಕೆಟಿಂಗ್ ಬೋರ್ಡಿನವರು ಒಂದು ಇಂಡಿಯಾ ಕಾಫಿ ಮಂದಿರವನ್ನು ತೆರೆಯಬೇಕೆಂದು ಅಪೇಕ್ಷಿಸಿ ಅದೇ ಕೌನ್ಸಿಲಿನವರು ಒಂದು ಠರಾವನ್ನು ಕಳೆದ ಜನವರಿಯಲ್ಲಿ ಮಾಡಿದ್ದರು. ಈಗ ಬೋರ್ಡಿನವರು ಆ ಕುರಿತು ಕೊಟ್ಟಿರುವ ಉತ್ತರವು—ಇಲ್ಲೊಂದು ಕಾಫಿ ಮಂದಿರವನ್ನು ತೆರೆಯಲು ತಮಗೆ ಸಮ್ಮತವಿದೆ, ಆ ಬಗ್ಗೆ ಏರ್ಪಾಡುಗಳನ್ನು ಮಾಡುತ್ತಿದ್ದೇವೆ ಎಂಬುದಾಗಿದ್ದು ಆ ಸಂಬಂಧದ ಮಾತುಕಥೆಗಳು ಮುಂಬರುವ ಮುನಿಸಿಪಲ್ ಕೌನ್ಸಿಲಿನ ಇದೇ ೧೦ನೇ ತಾರೀಕಿನ ಎಂಟಿಂಗಿನಲ್ಲಿ ನಡೆಯಲಿದೆ.

---

### ರೈಲ್ವೆ ಮುಂದಿಯ ಮುಷ್ಕರವಾಗದಂತೆ ಮಾಡಿದ ಯತ್ನ ವ್ಯರ್ಥ

ಸಮಗ್ರ ಭಾರತ ರೈಲ್ವೆ ಫೆಡರೇಶನಿನ ಕಾರ್ಯಕಾರಿ ಸಮಿತಿಯವರು, ೫ ದಿನ ಮಾತುಕಥೆ ನಡೆಸಿ, ರೈಲ್ವೆ ಬೋರ್ಡಿನವರ ಸೂಚನೆಗಳನ್ನು ನಿರಾಕರಿಸಿರುತ್ತಾರೆ. ರೈಲ್ವೆಯವರ ಮುಷ್ಕರವಾಗದಂತೆ ಮಾಡಿದ ಈ ಪ್ರಯತ್ನ ಹೀಗೆ ವಿಫಲವಾಗಿದೆ.

### ಹೊಟೆಲ್ ಕೆಲಸಗಾರರ ಮುಷ್ಕರ

ಮದ್ರಾಸ್ ನಗರದಲ್ಲಿನ ಸಾವಿರಾರು ಮಂದಿ ಹೊಟೆಲ್ ಕೆಲಸಗಾರರ ಮುಷ್ಕರ ವಿನ್ನೂ ಪರಿಹಾರ ಸೇರಿಲ್ಲ. ಸುಮಾರು ಒಂದು ವಾರದಿಂದ ಅಲ್ಲಿನ ಹೊಟೆಲುಗಳು ಬಂದಾಗಿದ್ದುವು. ಇವರೊಳಗೊಂದು ರಾಜೀ ತೀರ್ಮಾನಕ್ಕಾಗಿ ಒಬ್ಬ ಆಫೀಸರರ ನೇಮಕವಾಗಿದೆ. ಮಾಲಕರ ಮತ್ತು ಕೆಲಸಗಾರರ ವಿವಾದವು ಇದರಿಂದ ಇತ್ಯರ್ಥವಾದೀತಾಗಿ ನಿರೀಕ್ಷೆ. ಈ ಪಂಚಾಯಿತಿ ಆಫೀಸರರು ರಾವ್ ಬಹದೂರ್ ಎಂ. ವೆಂಕಟರಾಮಯ್ಯ.

---

## ಈ ವರ್ಷ ಮಳೆ ಹ್ಯಾಗೆ?

ಪುಣೆಯ "ಕೇಸರಿ" ಪತ್ರದ ಸಂಪಾದಕ ಶ್ರೀ। ಜನಾರ್ದನ ಕರಂದೀಕರ ಇವರು ಪ್ರತಿ ವರ್ಷದಂತೆ, ಮೇ ತಾ. ೧೫ರಿಂದ ಡಿಸೆಂಬರ ತಾ. ೧೫ರ ವರೆಗೆ ಗ್ರಹಮಾಲೆಯಲ್ಲಾಗುವ ಗ್ರಹಗಳ ಯುತಿ ಹಾಗೂ ಪ್ರತಿ-ಯುತಿಗಳನ್ನು ಅನುಲಕ್ಷಿಸಿ, ಈ ವರ್ಷದ ಮಳೆಯ ಭವಿಷ್ಯವನ್ನು ವರ್ತಿಸಿ ಪ್ರಕಟಿಸಿದ್ದಾರೆ. ಅದರ ಸಾರ ಈ ಕೆಳಗಿನಂತಿದೆ:—ಮೇ ತಾ. ೧೯ರಿಂದ ಹವೆಯಲ್ಲಿ ಬದಲಾವಣೆಯಾಗಿ ಮೇ ತಾ. ೨೫ರಿಂದ ಪ್ರಾರಂಭಿಕ ಮಳೆ ಹನಿಸಲು ಆರಂಭವಾಗುವದು; ಮತ್ತು ಜೂನ್ ತಾ. ೧೨ರಿಂದ ಜಡಿ ಮಳೆ ಸುರಿಯಲಾರಂಭವಾಗುವದು. ಜೂನ್ ತಿಂಗಳ ಕೊನೆಯ ಸುಮಾರಿಗೆ ಮಳೆಗೆ ಕಳೆ ಏರುವದು. ಜುಲಾಯಿ ತಿಂಗಳ ೧-೨ನೆಯ ವಾರಗಳಲ್ಲಿ ಮಳೆ ಮಧ್ಯಮ; ೩ನೆಯ ವಾರದಲ್ಲಿ ಕಡಿಮೆ; ಕೊನೆಯ ವಾರದಲ್ಲಿ ಮಾತ್ರ ಬಹಳ ಮಳೆಯಾಗುವದು. ಅಗೋಸ್ತು ತಿಂಗಳಲ್ಲಿ ಮಳೆಯ ಮಾನ ಕಡಿಮೆಯಿರುವದು; ಆದರೆ ಕೊನೆಯ ವಾರದಲ್ಲಿ ಜಲೋ ಮಳೆಯಾಗುವ ಲಕ್ಷಣಗಳುಂಟು. ಸಪ್ಟಂಬರ ತಿಂಗಳ ೩ನೆಯ ವಾರದಲ್ಲಿ ಮಳೆಗೆ ಅನುಕೂಲ ಯೋಗಗಳಿವೆ. ಆಶ್ವಿಜ ಮಾಸದ ಕೃಷ್ಣ ಪಕ್ಷದಲ್ಲೂ ಜಲೋ ಮಳೆಯಾಗುವ ಸಂಭವವಿದೆ ಕಾರ್ತಿಕ ಮಾಸದ ೧ನೆಯ ಹಾಗೂ ೩ನೆಯ ವಾರದಲ್ಲೂ ಮಳೆಯಾಗಬಹುದು. ಒಟ್ಟಾರೆ ಈ ವರ್ಷ ಮಳೆಯ ಯೋಗಗಳು ಸಾಧಾರಣವಿರುತ್ತಿದ್ದರೂ, ಮಳೆ ಇಲ್ಲೆಂದು ಒಕ್ಕಲಿಗರು ಮರುಗುವಂತಹ ಪರಿಸ್ಥಿತಿಯಿಲ್ಲ. ಮಳೆಯಾಗುವ ಸಂಭವವಿದ್ದ ತಾರೀಕುಗಳು ಈ ಕೆಳಗಿನಂತಿವೆ:—ಮೇ:—೧೯, ೨೨, ೨೫, ೨೯, ೩೧, ಜೂನ್:—೧, ೪, ೫, ೮, ೧೨, ೧೬, ೧೮, ೨೪ರಿಂದ ೩೦. ಜುಲಾಯಿ—೫, ೬, ೭, ೯, ೧೫, ೧೬, ೨೦ರಿಂದ ೨೪, ೨೬, ೨೯, ೩೧. ಅಗೋಸ್ತು:—೧ರಿಂದ ೩, ೫, ೧೧, ೧೩, ೧೮, ೨೦ರಿಂದ ೨೩, ೨೫, ೨೮, ೩೧. ಸಪ್ಟಂಬರ—೬, ೮, ೧೩, ೧೫, ೧೮, ೨೨, ೨೯, ೩೦. ಅಕ್ಟೋಬರ:—೩, ೪, ೯ ೧೧, ೧೭, ೧೯, ೨೧. ನವಂಬರ:—೧, ೩, ೪, ೭, ೧೧, ೧೨, ೧೬, ೨೪. (ಕಾನಡಾ ವೃತ್ತ)

---

## ನೋಟೀಸು

ಕುಂದಾಪುರ ಡಿ. ಮುನ್ಸಿಫ ಕೋರ್ಟಿನಲ್ಲಿ

R. E. P. 127/1946 O. S. 219/1945.

ವಾಸುದೇವ ಉಡುಪ — ಅರ್ಜಿದಾರ.

ದೇವಡಿಗ ನಾಗ ಕೂಡಾ — ಎದ್ರಿರು.

ಉಪ್ಪಿನ ಕುದ್ರು ಗ್ರಾಮದಲ್ಲಿರುವ ಸುಟ್ಟ ಹೆಂಗ್ಸಿನ ಮಗ, ದೇವಡಿಗ ನಂದು ಹೆಂಗ್ಸು, ಸುಬ್ಬಿ ಮಗಳು ಲಕ್ಷ್ಮಿ, ಪರಮೇಶ್ವರಿ ಮಗಳು ಅಕ್ಕಯ್ಯ ಸಹಾ 3 ಜನರಿಗೆ ಕೊಡುವ ನೋಟೀಸು:—

ಈ ಕೋರ್ಟು O. S. 153/1935 R. E. P. 512/1944ರಲ್ಲಿ ಡಿಪೋಜಿಟು ಇರುವ ಹಣ ಜಪ್ತಿ ಮಾಡಿಸಬೇಕೆಂತ ದಾಖ್ಲು ಮಾಡಿದ ಮೇಲಿನ ಅಮಲ್‌ಜಾರಿಯನ್ನು ತಾ. 15-6-46ಕ್ಕೆ ತನಖಿಗೆ ಇಡುವಹಾಗಿಯದೆ.

Sd. A. V. N. HEBBAR,
Pleader for Petitioner.

Kundapur, 1—6—46.

---

## ನೀಲಗಿರಿ ಮೊಡರ್ನ್ ಹಿಂದೂ ಹೋಟೆಲಿನಲ್ಲಿ ಮಕ್ಕಳ ಕೂಟ

ಮೊಡರ್ನ್ ಹಿಂದೂ ಹೋಟಿಲ್ ಮಾಲೀಕರಾದ ಶ್ರೀ। ಕೆ. ಸೀತಾರಾಮರಾಯರು ಕಳೆದ ತಾ. ೩೦ರಂದು ಒಂದು ಮಕ್ಕಳ ಕೂಟವನ್ನು ಏರ್ಪಡಿಸಿದ್ದರು. ಉಪಾಹಾರದ ನಂತರ ಮಕ್ಕಳ ಆಟದ ಪಂದ್ಯಗಳು ನಡೆದುವು. ಒಂದೆರಡು ಪಂದ್ಯಗಳಲ್ಲಿ ಗಂಡಸರೂ ಹೆಂಗಸರೂ ಭಾಗವಹಿಸಿದ್ದರು. ಮೈಸೂರು ಮಹಾರಾಜರ ಆಪ್ತ ಕಾರ್ಯದರ್ಶಿಗಳಾದ ತಂಬೂ ಚೆಟ್ಟಿಯವರ ಪತ್ನಿ ಲೇಡಿ ತಂಬೂ ಚೆಟ್ಟಿಯವರು ಅಧ್ಯಕ್ಷತೆ ವಹಿಸಿ ಪಂದ್ಯಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನಗಳನ್ನೂ ಇತರ ಮಕ್ಕಳಿಗೆ ಪಾರಿತೋಷಕಗಳನ್ನೂ ಹಂಚಿದರು. ಕೊಡಗಿನ ಸಂಘಾಣಿಯ ಮಹಾರಾಣಿಯವರ ಪುತ್ರಿ ಹುಡುಗಿಯರ "ಚಾಲೆಂಜ್ ಕಪ್"ನ್ನು ಆಟದ ಪಂದ್ಯಗಳಲ್ಲಿ ಹೆಚ್ಚು ಬಹುಮಾನಗಳನ್ನು ಪಡೆದ ಡಾ। ಯು. ರಾಮರಾಯರ ಮೊಮ್ಮಗಳಾದ ಶ್ರೀ। ಕೆ. ಸುಮಿತ್ರಾ ಎಂಬ ಬಾಲಕಿಗೂ, ಮೈಸೂರಿನ ರಾಜಕಾರ್ಯಪ್ರಸಕ್ತ ದಿವಾನ್ ಬಹದೂರ್ ಕೆ. ರಾಮಸ್ವಾಮಿಯವರ ಪತ್ನಿ ಶ್ರೀಮತಿ ಕಮಲಮ್ಮ ರಾಮಸ್ವಾಮಿಯವರಿತ್ತ ಹುಡುಗರ "ಚಾಲೆಂಜ್ ಕಪ್"ನ್ನು ಆಟದ ಪಂದ್ಯಗಳಲ್ಲಿ ಹೆಚ್ಚು ಬಹುಮಾನಗಳನ್ನು ಪಡೆದ ಶ್ರೀ। ಎಂ. ಎಸ್. ರಾಘವನ್‌ರವರ ಮಗ ಶ್ರೀ। ಆರ್. ಮೋಹನನಿಗೂ ದೊರೆಯಿತು.

ಸ್ವಾಗತ ಭಾಷಣದಲ್ಲಿ ಮಿಸ್. ಲಾಜರಸ್‌ರವರು ಇಂತಹ ಮಕ್ಕಳ ಕೂಟವನ್ನು ಈಚೆಗೆ ೩—೪ ವರ್ಷಗಳಿಂದ ಪ್ರತಿ ವರ್ಷವೂ ಶ್ರೀ। ಸೀತಾರಾಮರಾಯರು ನಡೆಸಿಕೊಂಡು ಬರುವ ವ್ಯವಸ್ಥೆ ಮಾಡಿದ್ದಕ್ಕೆ ಅಭಿವಂದಿಸಿದರು. ಲೇಡಿ ತಂಬೂ ಚೆಟ್ಟಿಯವರು ಶ್ರೀ। ಸೀತಾರಾಮರಾಯರಿಗಿರುವ ಮಕ್ಕಳ ಪ್ರೇಮವನ್ನು ಎತ್ತಿ ಹಿಡಿದು ಮಾತನಾಡಿದರು. ಶ್ರೀ। ಸೀತಾರಾಮರಾಯರು ತಮ್ಮ ಸ್ವಾಗತವನ್ನು ಮನ್ನಿಸಿ ಬಂದ ಲೇಡಿ ತಂಬೂ ಚೆಟ್ಟಿಯವರನ್ನೂ ಇತರ ಮಾನ್ಯ ಮಹನೀಯ ಮಹಿಳೆಯರನ್ನೂ ಮಕ್ಕಳನ್ನೂ "ಚಾಲೆಂಜ್ ಕಪ್"ಗಳನ್ನಿತ್ತ ಕೊಡಗಿನ ಸಂಘಾಣಿಯ ಮಹಾರಾಣಿಯವರನ್ನೂ ಮೈಸೂರಿನ ಶ್ರೀಮತಿ ಕಮಲಮ್ಮ ರಾಮಸ್ವಾಮಿಯವರನ್ನೂ ವಂದಿಸಿದರು.

ಬರುವ ವರ್ಷದ ಮಕ್ಕಳ ಕೂಟಕ್ಕೆ ಈಗಾಗಲೇ ಕೆಲವು ಮಹನೀಯರು ತಮ್ಮ ಬಹುಮಾನಗಳನ್ನು ಮುಂದಾಗಿ ಕೊಟ್ಟಿರುತ್ತಾರೆ.

---

## ಮೊಗವೀರ ವಿದ್ಯಾರ್ಥಿಗಳಿಗೆ ವೇತನ

### ಮೊಗವೀರ ವ್ಯವಸ್ಥಾಪಕ ಮಂಡಳಿ—ಮುಂಬಯಿ

ಈ ಮಂಡಳಿಯಿಂದ ವಿದ್ಯಾರ್ಥಿ ವೇತನ ಪಡೆಯಲಪೇಕ್ಷಿಸುವವರು, ತಮ್ಮ ಅರ್ಜಿ ಪತ್ರಗಳನ್ನು ಇದೇ ಜೂನ್ ೩೫ರೊಳಗೆ ಕಾರ್ಯದರ್ಶಿಗಳಿಗೆ ರವಾನಿಸತಕ್ಕದ್ದು.

ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾಗಿ ಹೆಚ್ಚಿನ ಗ್ರಾರ್ಕನ್ನು ಪಡೆದ ಮೊಗವೀರ ವಿದ್ಯಾರ್ಥಿನಿಗೆ,—ಒಂದು ವೇಳೆ ವಿದ್ಯಾರ್ಥಿನಿಯರು ಇರದಿದ್ದರೆ—ಮೊಗವೀರ ವಿದ್ಯಾರ್ಥಿಗಳಿಗೆ ಎಂದಿನಂತೆ "ಕೈಪುಂಜಾಲು ಚೆನ್ನಪ್ಪ ಸಾಹುಕಾರ ಸ್ಮಾರಕ ಚಿನ್ನದ ಪದಕ"ವನ್ನು ಇನಾಮಾಗಿ ಕೊಡಲಾಗುವುದು. ಆದುದರಿಂದ, ಹಿಂದುಸ್ಥಾನದ ಯಾವದೇ ಭಾಗದಲ್ಲಿ ಈ ವರುಷ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೊಗವೀರ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಆಯಾಯ ಶಾಲೆಯ ಮುಖ್ಯೋಪಾಧ್ಯಾಯರ ದಸ್ಕತು ಸಹಿತ ಅವರವರ ಮಾರ್ಕಿನ ಪಟ್ಟಿಯನ್ನು ಅವರ ಪೂರ್ಣ ಹೆಸರು, ವಿಳಾಸದೊಂದಿಗೆ ಇದೇ ಜೂನ್ ತಾ. ೩೦ರೊಳಗೆ ಮಂಡಳಿಯ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡುವಂತೆ ಅಪೇಕ್ಷಿಸಲಾಗಿದೆ ಎಂದು ಶ್ರೀ। ಯಸ್. ಸಿ. ಪಡುಬಿದ್ರಿ (ಪ್ರಧಾನ ಕಾರ್ಯದರ್ಶಿ) ಅವರು ತಿಳಿಸುತ್ತಾರೆ.

---

## ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಕೂಟ, ಉಡುಪಿ

(ಎರಡನೇ ಭಾಗ)

೨ನೇ ದಿನ ಮೇ ತಾ. ೩೦ರಂದು ಬೆಳಿಗ್ಗೆ ೯ ಘಂಟೆಗೆ ವಾಚನ ಸ್ಪರ್ಧೆ ಜರಗಿತು. ಕಾಲೇಜು ಶಾಲೆಗಳ ೪ ಮಂದಿ ಭಾಗವಹಿಸಿದರು. ಶ್ರೀಗಳಾದ, ಕೆ. ಎಟ್ಟಲ ಶೆಣೈ, ಎಸ್.ಎಲ್. ನಾರಾಯಣ ಭಟ್, ಮತ್ತು ಬಿ. ಅಂತಯ್ಯ ಸೆಟ್ಟರು ಏಮರ್ಶಕರಾಗಿದ್ದರು.

ಅಪರಾಹ್ನ ೩॥ ಗಂಟೆಗೆ ಪಂಡಿತ ಶ್ರೀ। ಕೆ. ವೆಂಕಟರಾಮಾಚಾರ್ಯರು ಸಭಾಪತಿಗಳಾಗಿದ್ದರು. ಧಾರವಾಡದ ಶ್ರೀ। ಎ. ಬಿ. ಅಂಬೂರರ ತಂತಿ ಸಂದೇಶವನ್ನು ಓದಿದ ಬಳಿಕ ಶ್ರೀ। ಕೊರಡ್ಕಲ್ ಶ್ರೀನಿವಾಸರಾಯರು ಭಾಷಣವೆತ್ತರು. ಅನಂತರ ಶ್ರೀ। ಕೆ. ಎಟಲ ಶೆಣೈ, ಬಿ.ಎ.,ಎಲ್.ಟಿ., ಇವರು ಮಕ್ಕಳೂ ಸಾಹಿತ್ಯವೂ ಎಂಬ ವಿಷಯ ಬೋಧಪರ ಭಾಷಣ ಮಾಡಿದರು. ಶ್ರೀ। ಹರಿದಾಸ ಬಲ್ಲಾಳರು ಬೇಂದ್ರೆಯವರ ಕವಿತಾ ವಾಚನ ಮಾಡಿದರು. ಯು. ರಾಧಾಬಾಯಿಯವರು "ಮೂವತ್ತ ಮೂರು ಕೋಟಿ" ಕವಿತೆಯನ್ನು ಶ್ರಾವ್ಯವಾಗಿ ಓದಿದರು. ಅಧ್ಯಕ್ಷರು ತಮ್ಮ ಗಂಭೀರ ಭಾಷಣದಲ್ಲಿ ಮಕ್ಕಳ ಜೀವನವು ಹೇಗೆ ಪವಿತ್ರವಾಗಿ ಅವರು ಮುಂದಿನ ಸತ್ಪ್ರಜೆಗಳಾಗಬಹುದು, ಮಹಾ ಜನಾಂಗವಾಗಬಲ್ಲರು ಎಂಬುದಾಗಿ ಸೋದಾಹರಣ ವಿವರಿಸಿದರು.

ನೃತ್ಯ, ಚಿಕ್ಕ ನಾಟಕಗಳು, ವಿವಿಧ ವಿನೋದಗಳಾದ ಮೇಲೆ ಧನ್ಯವಾದದೊಡನೆ ಈ ದಿನದ ಕಾರ್ಯಕ್ರಮವು ಮುಗಿಯಿತು.

ಸಮ್ಮೇಲನದ ಕೊನೆಯ ದಿನವಾದ ತಾ. ೩೧ ಬುಧವಾರದಂದು ಬೆಳಿಗ್ಗೆ ೯ ಗಂಟೆಗೆ ಭಾಷಣ ಸ್ಪರ್ಧೆ ಜರಗಿ, ಶಾಲೆಗಳ ೯ ಮಂದಿ ಭಾಗವಹಿಸಿದರು. ಶ್ರೀ। ಕೆ. ಸುಬ್ರಾಯಾಚಾರ್ಯರು, ಎಸ್. ಎಲ್. ನಾರಾಯಣ ಭಟ್, ಬಿ. ಅಂತಯ್ಯ, ಸೆಟ್ಟರು ವಿಮರ್ಶಕರಾಗಿದ್ದರು.

ಅಪರಾಹ್ನ ೩ ಗಂಟೆಗೆ ಮೊಡರ್ನ್ ಶಾಲೆಯಿಂದ ಮಕ್ಕಳ ರಾಷ್ಟ್ರ ಧ್ವಜದ ಮೆರವಣಿಗೆಯಲ್ಲಿ ಹೊರಟು ನಗರದ ಮುಖ್ಯ ಬೀದಿಗಳಲ್ಲಿ ರಾಷ್ಟ್ರಗೀತೆಯೊಡನೆ ಸುತ್ತಾಡಿ, ಸಮ್ಮೇಲನ ಭವನಕ್ಕೆ ತಲಪಲು ಅಸಂಖ್ಯ ಹೆತ್ತವರು ಸ್ವಾಗತಿಸಿದರು. ಸಭಾ ಭವನವು ಕಿಕ್ಕಿರಿದು ಪ್ರೇಕ್ಷಕರಿಂದ ತುಂಬಿತ್ತು. ಕೂಟದ ಅಧ್ಯಕ್ಷರು ಶ್ರೀ। ಎಂ. ವಿಟ್ಠಲ ಹೆಗ್ಗಡೆಯವರನು ಸಭಾಪತಿ ಪದಕ್ಕೆ ಆ ಮಂತ್ರಿಸಲು, ಶ್ರೀ। ಪಂಡಿತ ಪಿ. ಮುಖ್ಯ ಪ್ರಾಣ ತಂತ್ರಿಗಳು ಮಕ್ಕಳಲ್ಲಿ ನವಜಾಗ್ರತಿಯ ಮತ್ತು ಇಂತಹ ಸಮ್ಮೇಲನದ ಆವಶ್ಯಕತೆಯ ಕುರಿತು ಸುರಸವಾದ ಭಾಷಣ ಮಾಡಿದರು.





ಯಾವ ಅನುಪತ್ಯಕ್ಕೂ ಅಣಿಯಾಗಿದೆ.

ಸಾಂಬಕ್ ಭೂಲೋಕದಲ್ಲಿ ಉತ್ತಮ ಚರ್ಮ ಚಿಕಿತ್ಸೆ.

ಪ್ರತಿ ಮನೆಗೂ ಸಾಂಬಕ್ ಅಗತ್ಯ. ಈ ಅಮೂಲ್ಯ ವನಸ್ಪತಿ ಮುಲಾಮು, ಸಮ್ಮ ಚರ್ಮವ್ಯಾಧಿಗೆ ಖಾತರಿಯ ಕ್ರಿಮಿ ನಾಶಕ ಗುಣಕಾರಿಯಾಗಿದೆ. ಇದು ನೋವನ್ನು ಶಾಂತಗೊಳಿಸಿ, ಉರಿಬಾವು ತಗ್ಗಿಸಿ, ಅತ್ಯಾಶ್ಚರ್ಯಕರವಾಗಿ ವಾಸಿ ಮಾಡುತ್ತದೆ. ಎಲ್ಲೆಲ್ಲಿಯೂ ಡಾಕ್ಟರರು ಮತ್ತು ದಾದಿಯರು ಸಾಂಬಕ್‌ನ್ನು ಉಪಯೋಗಿಸುತ್ತಾರೆ. ಮತ್ತು ಶಿಫಾರಸು ಮಾಡುತ್ತಾರೆ. ಗಾಯ, ಜಜ್ಜು, ಸುಟ್ಟಗಾಯ, ಪಾದದಲ್ಲಿ ವ್ರಣ, ದದ್ದು, ಹುಣ್ಣು, ತುರಿಕಜ್ಜಿ, ನಂಜುಗಾಯ, ಚರ್ಮಚಿರುಕುಗಳೇ ಮೊದಲಾದುವಕ್ಕೆ ನೀವು ಸಾಂಬಕ್‌ನ್ನು ಅಧರಿಸಿರಬಹುದು. ಸಾಂಬಕ್ ಮುಲಾಂ, ಸಾಂಬಕ್ ಸಾಬೂನ್, ಸಾಂಬಕ್ ಪೌಡರ್ ಎಲ್ಲಾ ಔಷಧಿ ವ್ಯಾಪಾರಿಗಳು ಬಿಕರಿಮಾಡುತ್ತಾರೆ.

ಏಜಂಟರು:—ಮೆಸರ್ಸ್ ದಾಧಾ & ಕೊ., ಪಾರ್ಕ್ ಟೌನ್, ಮದ್ರಾಸು.

ಯಾವಾಗಲೂ ಸಾಂಬಕ್ ಉಪಯೋಗಿಸಿ.

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾದುದು.

ಯುವಕರಾದ ಶ್ರೀ. ಎಸ್. ಎಲ್. ನಾರಾಯಣ ಭಟ್ಟರು, ಮಕ್ಕಳ ಯೋಗ್ಯ ತರಬೇತಿಯ ಕುರಿತು ಸ್ಫೂರ್ತಿಯ ಭಾಷಣವಿತ್ತರು. ಶ್ರೀ. ಪಿ. ಎಲ್. ಉಪಾಧ್ಯಾಯರು ಸಭಿಕರ ಪರವಾಗಿ ಸಮ್ಮೇಲನದ ಪಾಠವನ್ನು ವಿವರಿಸಿದ ಮೇಲೆ ಕುಮಾರಿ ಬಿ. ರಾಧಾಬಾಯಿಯು "ಭಾರತಾಂಬೆ ಎಂಬ ಹಾಡನ್ನು ಹಾಡಿದಳು. ಬಿ. ಸುಂದರಿಬಾಯಿಯು ಹಾರ್ಮೋನಿಯಂ ವಾದನ ಮಾಡಿದಳು. ಬಿ. ವಸಂತರಾಯನು "ಭಿಕ್ಷಾಂದೇಹಿ" ಎಂಬ ಕವಿತೆ ಹಾಡಿದನು. ಯು. ರಾಧಾಬಾಯಿಯು "ಹಳೆಯ ನೆನಹು" ಎಂಬ ಕವಿತೆಯನ್ನೂ, ಶ್ರೀ॥ ಹರಿದಾಸ ಬಲ್ಲಾಳರು "ಮೂವತ್ತಮೂರು ಕೋಟಿ" ಕವಿತೆಯನ್ನೂ ಓದಿ ಸಭಿಕರನ್ನು ಹರ್ಷಸಾಗರದಲ್ಲಿ ತೇಲಿಸಿದರು. ಕುಮಾರ ಶ್ರೀ। ಗೋಪಾಲಕೃಷ್ಣಾಚಾರ್ಯನು "ಬೆಕ್ಕು ಹಾರುತಿದೆ ನೋಡಿದಿರಾ" ಪದವನ್ನು ಏನೋದವಾಗಿ ಹಾಡಿದ ಮೇಲೆ, ಅವನೂ ಶಾಂತಾರಾಮ ಭಟ್ಟರೂ "ಅನ್ನಾವತಾರ" ಎಂಬ ಚಿಕ್ಕ ದೃಶ್ಯವನ್ನು ಆಡಿದರು.

ಅನಂತರ ಕಿದಿಯೂರು ಹಾ. ಎಲಿ. ಶಾಲೆಯ ವಿದ್ಯಾರ್ಥಿನಿಯರು "ಶ್ರೀರಾಮ ವನವಾಸ" ಎಂಬ ಏಕಾಂಕ ನಾಟಕವನ್ನು ಅಭಿನಯಿಸಿದರು ಕುಮಾರಿ ನಳಿನೀ ಬಾಯಿಯು ಹಿಮ್ಮೇಳವಿಲ್ಲದೆ ನೃತ್ಯ ಪ್ರದರ್ಶನ ಮಾಡಿದಳು. ಸುರೇಶನೂ ಕೆಲವು ಪದ್ಯ ಹಾಡಿದ ಮೇಲೆ ಸಭೆಯ ಅಧ್ಯಕ್ಷರಾದ ಶ್ರೀ। ಎಟ್ಟಲ ಹೆಗಡೆಯವರು ಕೂಟದ ಶ್ರೇಯೋಭಿವೃದ್ಧಿಯನ್ನು ಹಾರೈಸಿ, ಸಮ್ಮೇಲನದ ಕಾರ್ಯಕಲಾಪಗಳನ್ನು ಎಮರ್ಶಿಸುತ್ತ, ಮಕ್ಕಳ ಜ್ಞಾನವೃದ್ಧಿಯಾಗಿ ಅವರು ಕೂಟಕ್ಕೆ ಸೇರಿ ಯೋಗ್ಯ ಪ್ರಜೆಗಳಾಗಲೆಂದರು.

ಕೂಟದ ಅಧ್ಯಕ್ಷ ಶ್ರೀ। ಅಂತಯ್ಯ ಸೆಟ್ಟರು, ಸಮ್ಮೇಲನದಲ್ಲಿ ಸಹಕರಿಸಿದ ಮಹನೀಯರಿಗೂ, ಹೆತ್ತವರಿಗೂ, ಸಭಿಕರಿಗೂ ಭಾಗವಹಿಸಿದ ಎಲ್ಲಾ ಮಕ್ಕಳಿಗೂ, ಶಾಲೆಯನ್ನು ಒದಗಿಸಿ ಕೊಟ್ಟ ಮೊಡನ್ರ್ ಶಾಲೆಯ ಮೆನೇಜರ್ ಶ್ರೀ। ಕೆ. ಜಗನ್ನಾಥ ನಾಯ್ಕರಿಗೂ, ಸ್ಪರ್ಧೆಯಲ್ಲಿ ಗೆದ್ದವರಿಗೆ ಪಾರಿತೋಷಕಗಳನ್ನು ಉಚಿತವಾಗಿ ಕೊಟ್ಟು ನೆರವಾದ ಶ್ರೀಗಳಾದ ಕಲ್ಮಂಜೆ ವ್ಯಾಸಾಚಾರ್ಯರು, ರಾಧಾಕೃಷ್ಣ ಪೈ, ಸುಖನಿವಾಸದ ಎಚ್. ವೆಂಕಟೇಶ ನಾಯ್ಕರು, ಕೆ. ಹೊನ್ನಯ್ಯ ಶೆಟ್ಟರು, ಶ್ರೀ। ಬಿ. ರಾಮಕೃಷ್ಣಾಚಾರ್ಯರಿಗೂ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ಅನಂತರ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣವು ಜರಗಿತು. ಲೇಖನಕ್ಕೆ ಶ್ರೀ। ಅನಂತ ಪುರಾಣಿಕರಿಗೆ ಪ್ರಥಮ ಉಚಿತವೂ, ಶ್ರೀ।ಯು. ಪಾಂಡುರಂಗ ಕಾಮತರಿಗೆ ೨ನೇ ಬಹುಮಾನವೂ; ವಾಚನದಲ್ಲಿ ಕುಮಾರಿ ರಾಧಾಭಾಯಿಗೆ ಮೊದಲನೆ ಮತ್ತು ಅನಂತ ಪುರಾಣಿಕರಿಗೆ ೨ನೆಯ ಉಚಿತವೂ, ಭಾಷಣಸ್ಪರ್ಧೆಯಲ್ಲಿ ಯು. ಬಿ. ಪ್ರಭಾಕರ ರಾವ್ ಮೊದಲನೆಯ ಮತ್ತು ಕೊಚ್ಚಿಕಾರ ರಘುರಾಮಪೈ, ೨ನೇ ಬಹುಮಾನವನ್ನು ಪಡೆದರು. ನಾಟಕ ಪ್ರದರ್ಶನಕ್ಕಾಗಿ ಕಿದಿಯೂರು ಶಾಲೆಗೂ ವಿಶೇಷ ಪಾರಿತೋಷಿಕ ಕೊಡಲಾಯ್ತು. ಮಂಗಲಗೀತೆಯೊಡನೆ ಸಮ್ಮೇಲನವು ಮುಕ್ತಾಯವಾಯ್ತು.

——

### ಸಿಲೋನಿನಲ್ಲಿ ಹಿಂದೀ ಶ್ರಮಜೀವಿಗಳು

ಸಿಲೋನಿನ ತೋಟಗಳಿಂದ ಹಿಂದೀ ಕೆಲಸಗಾರರನ್ನು ಹೊರ ನೂಕುವ ಪ್ರಯತ್ನ ನಡೆದಿದ್ದು ಆ ಸಂಬಂಧವಾಗಿ ಸಿಲೋನಿನ ಭಾರತೀಯ ಕಾಂಗ್ರೆಸಿನವರು ಸಿಂಹಳದ ಮಂತ್ರಿಮಂಡಲಕ್ಕೊಂದು ಎನಂತಿಯನ್ನು ಕಳುಹಿಸಿದ್ದಾರೆ. ಆದರಲ್ಲಿ ಭಾರತದ ಕೆಲಸಗಾರರನ್ನು ಸಿಲೋನಿನಿಂದ ಹೊರ ನೂಕಬಾರದು; ಅವರಿಗೆ ಅಲ್ಲಿ ಕೆಲಸ ಕೊಡಬೇಕು; ಕೆಲವರ ಮೇಲಿನ ಪ್ರಾಶಿಕ್ಯೂಶನ್ ಹಿಂದೆಗೆಯಬೇಕು ಎಂದಿದೆ.

### ಈಜಿಪ್ಟಿನ ಅರಳೆ ನಿಯೋಗಿಗಳು

ಈಜಿಪ್ಟಿನ ಅರಳೆ ವಿಚಾರಣಾ ಶಿಷ್ಟ ಮಂಡಲದವರು ಕೈರೋದಿಂದ ಆಗಲೇ ಕರಾಚಿಗೆ ಬಂದಿದ್ದು ಅಲ್ಲಿಂದ ಬೊಂಬಯಿ, ಅಹಮ್ಮದಾಬಾದ್, ಕೊಯಮುತ್ತೂರು, ಮದ್ರಾಸ್, ಕಲ್ಕತ್ತಾ ಮೊದಲಾದ ಕಡೆ ಸಂದರ್ಶಿಸಲಿರುವರು. ಇವರ ಸಂದರ್ಶನದ ಮುಖ್ಯೋದ್ದೇಶವು—ಭಾರತದ ನೇಕಾರರ ಅವಶ್ಯಕತೆಗಳೇನು ಎಂಬಿತ್ಯಾದಿ ವಿಷಯಗಳನ್ನು ಇಲ್ಲಿ ತಿಳಿದುಕೊಂಡು ಈಜಿಪ್ಟ್—ಇಂಡಿಯಾದೊಳಗಿನ ಅರಳೆ ಪದಾರ್ಥಗಳ ವ್ಯಾಪಾರವನ್ನು ವರ್ಧಿಸುವುದೇ ಆಗಿದೆ.

——

# ಇಂದಿನ ಗಡಿನಾಡಿನ ಗಾಂಧಿ

## (ಭಾಗ ೨)

ಅಫಘಾನಿಸ್ತಾನದ ಮಾತ್ರವಲ್ಲ, ಇಡೀ ಭಾರತದ ಜನತೆಯೂ ಖಾನರನ್ನು ಮೆಚ್ಚಿಕೊಂಡಿತ್ತು ಕೆಲ ಬಿಳಿ ರಾಜಕಾರಣಿಗಳ ಒಳಸಂಚು ಮತ್ತು ವಿಶ್ವಾಸಘಾತಕತನದಿಂದ ಪದಚ್ಯುತನಾದ ಬಾದಶಾಹ ಅಮನುಲ್ಲನು ಇಟಲಿಯಲ್ಲಿ ಶರಣಾರ್ಥಿಯಾಗಿದ್ದನು. ತನ್ನ ಸ್ವದೇಶದಿಂದ ಸಹಾಯವು ಅತನಿಗೆ ಹೋಗುವುದನ್ನು ಖಾನರು ಕಡಿಮೆ ಮಾಡಲು ಯತ್ನಿಸಿದರು. ಆದರೆ ೧೯೩೦ನೇ ಇಸವಿಯಲ್ಲಿ ಅವರು ರಾಷ್ಟ್ರೀಯ ಕಾಂಗ್ರೆಸಿಗೆ ಸೇರಿ, ಬ್ರಿಟಿಶರ ಗುಲಾಮಗಿರಿಯ ನೊಗವನ್ನು ಕಿತ್ತೊಗೆಯುವ" ರಾಷ್ಟ್ರೀಯ ಕಾರ್ಯದ ಒಂದು ಮಹಾ ಯಜ್ಞಕ್ಕೆ ಕೈ ಹಚ್ಚಿದರು

ಖಾನರ ಮತ್ತು ಮಹಾತ್ಮಾಜಿಯವರ ಸಖ್ಯ—ಸ್ನೇಹಗಳ ಫಲವಾಗಿ, ಮಹಾತ್ಮಾಜಿಯವರು ಗಡಿನಾಡನ್ನು ಅನೇಕ ಸಲ ಸಂದರ್ಶಿಸುವಂತಾಯಿತು. ಗಾಂಧೀಜಿಯವರು ತಮ್ಮ ಕಡೆಗೆ ಬಂದಾಗಲೆಲ್ಲ, ಅವರಿಗೆ ಅದೊಂದು ಸಂಭ್ರಮದ ಹಬ್ಬವಾಗುತ್ತಿತ್ತು. ಮಹಾತ್ಮರ ಅಹಿಂಸಾ ತತ್ವವನ್ನು ಸರ್ವ ಪಠಾಣರೂ ಪಾಲಿಸಿದರು. ಗಾಂಧೀಜಿಯವರ ಭೇಟಿಯ ಫಲವಾಗಿ, ಅವರಲ್ಲಿ ನವ ಸ್ಫೂರ್ತಿಯು ತುಂಬಿಕೊಂಡಿತು. ಖಾನರ ಸೇವಾದಳವಾದ "ಖುದಾಯಿ ಕಿದ್ಮತ್ ಗಾರ"ರು, ಗಾಂಜೀಜಿಯವರ ಚಳವಳಿಗಳಲ್ಲಿ ಭಾಗ ವಹಿಸಿ, ಗಾಂಧೀಜಿಯವರ ಅಭಿಮಾನ ಒಲಿಮೆಗಳನ್ನು ಗಳಿಸಿಕೊಂಡರು. ಒಂದು ಬಾರಿ, ತನ್ ಉತ್ತರದ ಪ್ರವಾಸದ ಸಂದರ್ಭದಲ್ಲಿ, ಗಾಂಧೀಜಿಯವರು ಖಾನರಿಗೆ ಹೀಗೆಂದು ಕಣ್ಣೀರಿಳಿಸುತ್ತ ಹೇಳಿಕೊಂಡರು:—"ನನ್ನ ಹಿಂದು ಸತ್ಯಾಗ್ರಹಿಗಳು ಕೆಲ ಮಟ್ಟಿಗೆ ನನಗೆ ಅಪಯಶಸ್ಸನ್ನು ತಂದರೂ, ನೀರ ಖುದಾಯಿ ಖಿದ್ಮತ್‌ಗಾರರು ಸತ್ಯಾಗ್ರಹವನ್ನು ಮುಂದೊತ್ತುವರೆಂಬ ಭರವಸೆ ಉಂಟಾಗಿದೆ ನನಗೆ."

೧೯೩೦ರ ಕಾಯಿದೆ ಭಂಗ ಚಳವಳಿ ಮತ್ತು ಉಪ್ಪಿನ ತೆರಿಗೆಯ ನಿಷೇಧಾರ್ಥವಾದ ಚಳವಳಿದಲ್ಲಿ ಭಾರತೀಯರು ತೊಡಗಿದ್ದಾಗ್ಯೂ, ಗಡಿನಾಡಿನ ಪ್ರಾಂತದಿಂದ ವಾಯುವ್ಯ ಗಡಿನಾಡು ಪ್ರಾಂತವೂ ಕೂಡ ಭಾರತದೊಡನೆ ಅದರ ಸ್ವಾತಂತ್ರ್ಯದ ಹೋರಾಟದಲ್ಲಿ ಸೇರಿಕೊಂಡಿತು ಎಂಬ ಸುದ್ದಿ ಬಂತು. ಗಡಿನಾಡಿನಲ್ಲಿ ಸರಕಾರದವರು ನಾಗರಿಕರ ಮೇಲೆ ಗೋಳಿಬಾರು ಮೊದಲಾದ ಉಗ್ರ ಶಾಸನ ಕ್ರಮಗಳನ್ನು ನಡೆಸಿದರು. ಇದರಿಂದ ಸುಮಾರು ೫೦೦ ಕ್ಕಿಂತಲೂ ಹೆಚ್ಚು ಮಂದಿ ಜನರು ಮಡಿದರು. ಅವರೆಲ್ಲ ಅಹಿಂಸಾ ನೀತಿಯ ಕ್ರಮದಲ್ಲಿ ಎರತನದಿಂದ ಹೋರಾಡಿ ಮಡಿದರು. ಈ ಸಮಯದಲ್ಲಿ ಖಾನರ ನಾಯಕತ್ವವು, ಚಳವಳಿಗೆ ಅತ್ಯಂತ ಕಳೆಯನ್ನು ಕೊಟ್ಟಿತು. ೧೯೩೦ನೇ ಮೇ ೨೯ರ "ಯಂಗ್ ಇಂಡಿಯಾ"ದಲ್ಲಿ, ಪಠಾಣ ಚಳವಳಿಗಾರರನ್ನು ಪ್ರಶಂಸಿಸಿ ಒಂದು ಲೇಖನವು ಪ್ರಕಟಿಸಲ್ಪಟ್ಟಿತು.

೧೯೩೦ರ ಮೊದಲು ಗಡಿನಾಡಿಗೆ ಅಷ್ಟೊಂದು ಪ್ರಾಮುಖ್ಯತೆಯನ್ನು ಭಾರತದ ರಾಜಕೀಯ ಹೋರಾಟದಲ್ಲಿ ಕೊಡುತ್ತಿದ್ದಿಲ್ಲ; ಅದನ್ನು ಗಾಂಧೀಜಿಯವರೂ ಇತರ ಕಾಂಗ್ರೆಸಿನ ನಾಯಕರೂ ಭಾರತ ಸ್ವಾತಂತ್ರ್ಯದ ಹೋರಾಟದಲ್ಲಿ ಏರ್ಪಡಿಸಿಕೊಂಡಿರಲಿಲ್ಲ. ಆದರೆ ಮುಂದೆ ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಖಾನರ ಮುಂದಾಳುತನದಲ್ಲಿ, ಗಡಿನಾಡು ಹೇಗೆ ಭಾರತದೊಡನೆ ಸನ್ನಾವೇಶಗೊಂಡು ಶಿಸ್ತಿನಿಂದ ಸಾಗಿತು ಎಂಬುದು ಗಮನೀಯವಿರುತ್ತದೆ. ಭಾರತದ ವಾಯುವ್ಯ ಕೋನವು, ಭಾರತಕ್ಕೆ ಆಯಕಟ್ಟಿನ ಒಂದು ಪ್ರಾಮುಖ್ಯ ವ್ಯೂಹವಾಗಿ ಇರುತ್ತದೆ. ಸ್ವತಂತ್ರ ಭಾರತದಲ್ಲಿ ಅದರ ಸ್ವಾಯತ್ತತೆ ಹಾಗೂ ಭದ್ರತೆಯು ಸೇರುವಂತಾಗುವುದಕ್ಕೆ ಗಡಿನಾಡಿನ ಜನತೆಯು ಎಚ್ಚತ್ತು ಉದ್ಯೋಗಿಸುತ್ತಿರುವುದು ಪ್ರಸಂಗೋಚಿತವಾದ ಕಾರಣವಾಗಿದೆ.


USE
OUR GENUINE
**EUCALYPTUS OIL**
FOR ALL
**ACHES & PAINS**

FOR HEALTH USE
SILVER KING
CASTOR OIL
LAKSHMI OIL MILLS,
COIMBATORE.

**ಬೊರಟಾಲ್ಕ್**

ನಿದೋರ್ಷ ಚರ್ಮಕ್ಕೆ ವೈದ್ಯರ ಸಲಹೆ

ಬೊರಾಟಾಲ್ಕನ ತಯಾರಿಕೆಯಲ್ಲಿ ಉಪಯೋಗಿಸುತ್ತಿರುವ ಹಲವಾರು ದ್ರವ್ಯಗಳ ಔಷಧದ ಗುಣಗಳಿಂದ ಅದು ಚರ್ಮವನ್ನು ಕಾಂತಿಯುಕ್ತವಾಗಿ ಮಾಡುವಲ್ಲಿ ಆದರ್ಶಪ್ರಾಯವಾದ ಶೃಂಗಾರ ಸಾಮಗ್ರಿಯಾಗಿರುತ್ತದೆ. ಮೃದು ಚರ್ಮಕ್ಕೆ ಸುರಕ್ಷಿತವೆಂದು ಶಿಫಾರಸು ಮಾಡಲಾಗಿದೆ.

ಏಜಂಟರು:—
ವಿ. ಸಿ. ರಾಮುಲಿಂಗಂ ಎಂಡ್ ಸನ್ಸ್,
2/422 ಮಿಂಟ್ ಸ್ಟ್ರೀಟ್, ಮದ್ರಾಸು.

ಮಾರಕರು:—
ನೇಶನಲ್ ಟ್ರೇಡಿಂಗ್ ಕೊ., ಬೊಂಬಯಿ.

ಖಾನರ ತಂದೆಯು ಪೇಶಾವರದಲ್ಲಿಯ ಉತ್ ಮಂಝಾಯಿ ಗ್ರಾಮದ ನಾಯಕ ನಾಗಿದ್ದರು. ಅವರು ಸಿಪಾಯಿ ದೆಂಗೆಯ ಅಂದಿನ ಕ್ರಾಂತಿಮಯ ದಿನಗಳನ್ನು ಪ್ರತ್ಯಕ್ಷ ಕಂಡಿದ್ದರು. ಗಾಂಧೀಜಿಯವರು, ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೆ ಕಲಿತರು; ಆದರೆ ಖಾನರು ಮಸೀದಿಯಲ್ಲಿ ಒಂದು ಧಾರ್ಮಿಕ ಶಾಲೆಯಲ್ಲಿ ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದರು. ಅನಂತರವೇ ಅವರು ಇಂಗ್ಲಿಷ್ ಕಲಿತರು. ಆದರೆ ಮೆಟ್ರಿಕಿನಲ್ಲಿ ತೇರ್ಗಡೆ ಹೊಂದಲಿಲ್ಲ; ಹಾಗಾಗಿ ಶಾಲೆಗೆ ಆಸ್ಫರಲ್ಲೇ ಅವರು ಬೆನ್ನು ಹಾಕಿದರು. ಗಾಂಧೀಜಿಯವರು ಒಬ್ಬ ಕ್ರಾಂತಿಕಾರಿಯಾದ್ದರೂ ಅವರು ಇಂಗ್ಲಿಷರ ದೃಷ್ಟಿಯಲ್ಲಿ "ಶಾಂತ ಕ್ರಾಂತಿಕಾರ" ಎಂದು ಪರಿಗಣಿಸಲ್ಪಟ್ಟರುತ್ತಾರೆ. ಖಾನರು, ಜನ್ಮತಃ ಯೋಧಕುಲದವರು. ಖಡ್ಗ ಗುಂಡುಗಳ ಪ್ರಯೋಗದಲ್ಲಿ ಅಭ್ಯಾಸಗೊಂಡ ನಿಸ್ಸೀಮರು. ಆದರೆ ಖಾನರು ಹಿಂಸಾವಾದದಿಂದ ಅಹಿಂಸೆಗೆ ತಿರುಗಿದ ಒಬ್ಬ ಆತ್ಮ ಸಂಯಮಿಗಳೆಂಬುದನ್ನು ಮರೆಯಲಾಗದು.

ಗಾಂಧೀಜಿಯವರು ಖಾನರಿಗೆ ಧಾರ್ಮಿಕ ಶ್ರದ್ಧೆಯನ್ನು ಹುಟ್ಟಿಸಿದರು. ಇದರ ಫಲವಾಗಿ ಖಾನರು "ಖುದಾಯಿ ಖಿದ್ಮಾತ್‌ಗಾರ" ("ದೇವರ ಸೇವಕರು.") ದಳವನ್ನು ಸ್ಥಾಪಿಸಿದರು. ಕಾಯಿದೆಭಂಗ ಚಳವಳಿಯ ಮರುವರ್ಷ ಅಂದರೆ ೧೯೩೧ರಲ್ಲಿ ಕರಾಚಿಯಲ್ಲಿ ಅ. ಭಾ. ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ಜರುಗಿತು. ಆ ಅಧಿವೇಶನವು ಜರುಗುತ್ತಿದ್ದಾಗ, ಕೆಂಪು ಬಣ್ಣದ ಸಮವಸ್ತ್ರವನ್ನು ಧರಿಸಿಕೊಂಡ ಒಂದು ಜನರ ಸಮೂಹವು ಅಧಿವೇಶನದ ಸಭಾ ಮಂಟಪದ ಕಡೆಗೆ ಬರುತಿದ್ದುದನ್ನು ಜನರು ನೋಡಿದರು. ಸಭೆಯನ್ನು ಗಾಬರಿಗೊಳಿಸಿ ಚದರಿಸುವ ಉದ್ದೇಶದಿಂದ, "ಕಮ್ಯುನಿಸ್ಟರ ದಂಡು—ದೊಡ್ಡ ದಂಡು ಬರುತ್ತಿದೆ" ಎಂದು ಕೆಲ ಜನರು ಕೂಗಾಡಿದರು. ಅಬ್ದುಲ್ ಗಫಾರ್ ಖಾನರು, ಆ ದಂಡನ್ನು ಸ್ವಲ್ಪ ಹೊತ್ತಿನಲ್ಲಿ ಬಂದು ಸೇರಿದರು ಆ ದಂಡಿನವರು ಖಾನರ "ಕೆಂಪಾಗಿಯ ಪಡೆ" ಹಾಗೂ "ಖುದಾಯಿ ಖಿದ್ಮಾತ್‌ಗಾರ"ದ ಸ್ವಯಂಸೇವಕರೆಂದು ಜನರಿಗೆ ಎಲಂಬವಾಗಿ ತಿಳಿದುಬಂತು ಖಾನರು ತಾವು ಸಭೆಗೆ ಅಗತ್ಯವಲ್ಲವೆಂಬ ಕಾರಣದಿಂದ ಕಾಂಗ್ರೆಸಿಗೆ ತಮ್ಮ ಆಗಮನವನ್ನು ಮುಂತಿಳಿಸಿದ್ದಿರಲಿಲ್ಲ. ಖಾನರು ಮತ್ತು ಅವರ ದಳದವರು ಕರಾಚಿಯಲ್ಲಿ ಭಾರತೇಯರಿಗೆ ಪ್ರಥಮ ಸಂದರ್ಶನವನ್ನು ಕೊಟ್ಟರು. ಇದರಿಂದ ಭಾರತೇಯರ ಹೃದಯದಲ್ಲಿ ಗಡಿನಾಡಿನ ಜನತೆಯ ಬಗ್ಗೆ ಆದರವು ಉಂಟಾಯಿತು.

ಅಂದಿನ ಅಧಿವೇಶನದಲ್ಲಿ, ಲಂಡನಿನಲ್ಲಿ ನೆರೆಯುವ ದುಂಡು ಮೇಜಿನ ಪರಿಷತ್ತಿಗೆ, ಕಾಂಗ್ರೆಸಿನ ಪ್ರತಿನಿಧಿಗಳನ್ನು ಆರಿಸುವ ಚುನಾವಣೆಯಲ್ಲಿ, ಗಾಂಧಿಜಿಯವರು ಮುಖ್ಯಪ್ರತಿನಿಧಿಯಾಗಿ ಪರಿಷತ್ತಿನಲ್ಲಿ ಭಾಗವಹಿಸಬೇಕೆಂದು ನಿರ್ಣಯವಾಯಿತು ಬಹುಮತವು ಗಾಂಧೀಜಿಯವರಿಗೆ ಇದ್ದರೂ, ಕೆಲವು ಸಾಮಾನ್ಯ ನಾಯಕರು ಗಾಂಧೀಜಿಯವರೊಂದಿಗೆ, ತಾವು ಕೂಡ, ಅವರ ಗೌರವದ ಪಾಲನ್ನು ಹೊಂದಬೇಕೆಂಬ ಇಚ್ಛೆಯಿಂದ, ಆ ನಿರ್ಣಯಕ್ಕೆ ವಿರೋಧವನ್ನು ಸೂಚಿಸಿದರು. ಆದರೆ ಅಷ್ಟರಲ್ಲಿ, ಖಾನರು ಚರ್ಚಾ ಕೂಟಕ್ಕೆ ಚಿತ್ರೈಸಿದರು. ಅವರನ್ನು ಗುರುತಿಸುತ್ತಲೇ ಸಭಾಸದರು ಖಾನರ ಹೆಸರನ್ನು ಪ್ರತಿನಿಧಿ ಸಾನಕ್ಕೆ ಸೂಚಿಸಿದರು. ಆ ಹೆಸರನ್ನು ಸೂಚಿಸಿದಾಗ, ಸಭಾಸದರು, ಒಮ್ಮೆಲೇ ಅವೇಶಗೊಂಡವರಾಗಿ, ಹರ್ಷದಿಂದ ಘೋಷಣೆ, ಕೈಚಪ್ಪಾಳೆಗಳನ್ನು ಮಾಡುತ್ತ ಅದಕ್ಕೆ ಸಮ್ಮತಿ ಪ್ರದರ್ಶಿಸಿದರು. ಆಯ್ಕೆಯ ಕಾಲದಲ್ಲಿ, ಹೆಸರನ್ನು ಸೂಚಿಸುವಾಗ, ಈ ರೀತಿಯ ಒಂದು ಸಮ್ಮತಿಯ "ಸಂಭ್ರಮ" ಸೂಚನೆಯು ಮಹಾತ್ಮರನ್ನು ಬಿಟ್ಟು ಇನ್ನೊಬ್ಬನಿಗೆ ಒಲಿದಂತೆ ಆ ವರೆಗೆ ಪ್ರದರ್ಶಿತವಾಗಿದ್ದಿಲ್ಲ ಆದರೆ ಖಾನರು, "ನಾನೊಬ್ಬ ಸೈನಿಕನಿರುತ್ತೇನೆ. ನನಗೆ ನನ್ನ ಮುಖಂಡರಾದ ಮಹಾತ್ಮಾಜಿಯವರ ಒಂದೇ ಒಂದು ಶಬ್ದವೂ ಕೊನೆಯ ಆಜ್ಞೆಯಾಗಿದೆ" ಎಂದು ಹೇಳಿ ಕುಳಿತುಕೊಂಡರು. ತಕ್ಷಣ ಗಾಂಧೀಜಿಯವರು ದುಂಡು ಮೇಜಿನ ಪರಿಷತ್ತಿಗೆ ಅ. ಭಾ. ರಾಷ್ಟ್ರೀಯ ಕಾಂಗ್ರೆಸಿನ ಮುಖ್ಯ ಪ್ರತಿನಿಧಿಯಾಗಿ ಆರಿಸಲ್ಪಟ್ಟರು.

೧೬೪೧ರಲ್ಲಿ, ಬ್ರಿಟಿಷರು ಯುದ್ಧದಲ್ಲಿ ತೊಡಗಿದ್ದ ಬಿಕ್ಕಟ್ಟಿನ ಕಾಲದಲ್ಲಿ, ಆ ಸಂದರ್ಭವನ್ನು ಅನುಕೂಲಿಸಿಕೊಂಡು ಬ್ರಿಟಿಷರಿಗೆ ಸಹಕಾರವನ್ನೀಯದೆ, ಅವರನ್ನು ಭಾರತದಿಂದ ಅಟ್ಟುವ ಒಂದು ತೀವ್ರ ಕಾರ್ಯಕ್ರಮವನ್ನು ಹಿಂದೀಯರು ಕೈಕೊಳ್ಳಬೇಕೆಂದು ಸೂಚಿಸಲ್ಪಾಯಿತು. ಅದನ್ನು ನೆಹರು, ಪಟೇಲ್, ರಾಜಗೋಪಾಲಾಚಾರ್ಯ ಮೊದಲಾದರು ಸಮ್ಮತಿಸುತ್ತ, ಮಹಾತ್ಮರ ಅಭಿಮತವನ್ನು ಎಂದಲೂ ಕೂಡ ಅವರು ನಿರ್ಧರಿಸಿದ್ದರು. ಆದರೆ ಅಂಥ ಸಂದಿಗ್ಧ ನೆಲೆಯಲ್ಲಿ ಒಬ್ಬನೇ ಒಬ್ಬ ವ್ಯಕ್ತಿ ಮಾತ್ರ ಗಾಂಧೀಜಿಯವರಿಗೆ ಮತ್ತು ಅಹಿಂಸಾ ನೀತಿಗೆ ನಂಬುಗೆಯ ಅನುವರ್ತಿಯಾಗಿ ನಿಂತಿದ್ದರು. ಅವರೇ ಗಡಿನಾಡಿನ ಗಾಂಧಿ.

——

## ಮದ್ರಾಸ್ ಎಸೆಂಬ್ಲಿ ಮುಕ್ತಾಯ

ಮದ್ರಾಸ್ ಎಸೆಂಬ್ಲಿಯಲ್ಲಿ ಮುಂದಿನ ಬಜೆಟ್ಟಿಯ ವಿಚಾರಗಳ ಚರ್ಚೆ ಮುಗಿದು ಎಸೆಂಬ್ಲಿಯ ಈ ಅಧಿವೇಶನವು ಕೊನೆಗಂಡಿತು. ಬಜೆಟ್ಟಿ ಸಂಬಂಧದ ಚರ್ಚೆಯಲ್ಲಿ ೬೧ ಮಂದಿ ಸದಸ್ಯರು ಭಾಷಣ ಮಾಡಿದರು. ಪ್ರಧಾನರು "ಅನ್ನ ಬಟ್ಟೆಗಳ ಪರಿಸ್ಥಿತಿ"ಯ ವಿಷಮತೆಯ ಕುರಿತು ಪ್ರಸ್ತಾವಿಸಿ ಬೊಂಬಯಿ–ಮದ್ರಾಸ್‌ಗಳೊಳಗೆ ಭೇದ ಕಲ್ಪನೆ ಮಾಡಿದುದುದರಿಂದಲೇ ಮದ್ರಾಸಿಗೆ ಬಟ್ಟೆ ಕಡಿಮೆಯಾಯಿತೆಂದು ತಿಳಿಸಿದರು. ಇಂಡಿಯಾ ಸರಕಾರ ಮರ್ಜಿಗೂ ಪ್ರಾಂತಗಳ ಕಾರ್ಯನೀತಿಗೂ ಪರಸ್ಪರ ಹೊಂದಿಕೆ ಸಾಲಲಿಲ್ಲವೆಂದರು. ಪ್ರಾಂತಗಳನ್ನು ಇಂಡಿಯಾ ಸರಕಾರದ ಕಾರ್ಯನೀತಿಯೊಡನೆ ಪೋಣಿಸಿ ಬಿಡಬಾರದು; ಅದರಿಂದ ಬಾಧಕವಿದೆ–ಎಂದರು. ಸಹಕಾರ ಸಂಘಗಳ ಕುರಿತು ಪ್ರಸ್ತಾವಿಸಿ, ಗ್ರಾಮ ಸಮಿತಿಗಳ ಕರ್ತವ್ಯಗಳನ್ನು ವಿವರಿಸಿ, ಬಟ್ಟೆ ಹತೋಟಿ ಇಲಾಖೆಯ ಮೇಲಿನ ಅಪವಾದಗಳನ್ನು ಅಲ್ಲಗಳೆದು ಪ್ರಧಾನರು ಎಲ್ಲರ ಸಹಕಾರ ಕ್ಕಾಗಿಯೂ ವಿನಂತಿಸಿದರು.

## ಸ್ಟೇಶನ್ ಮಾಸ್ಟರುಗಳ ಮುಷ್ಕರದ ನೋಟೀಸು

ಸೌತ್ ಇಂಡಿಯನ್ ರೈಲ್ವೆಯ ಸುಮಾರು ೧೪೦೦ ಮಂದಿ ಸ್ಟೇಶನ್ ಮಾಸ್ಟರು ಗಳು ಕಳೆದ ಜೂನ್ ತಾ. ೪ರಲ್ಲಿ ರೈಲ್ವೆ ಕಂಪೆನಿ ಮೆನೇಜರರಿಗೆ ಮುಷ್ಕರದ ನೋಟೀಸ್ ಕೊಟ್ಟಿದ್ದಾರೆ. ಇವರೆಲ್ಲರೂ ತಾ. ೨೫ (ಜೂನ್)ರ ಮಧ್ಯ ರಾತ್ರಿಯಿಂದ ಮುಷ್ಕರ ಹೂಡಲಿದ್ದಾರೆ ಈ ಮುಷ್ಕರದಲ್ಲಿ ಸೇಕಡಾ ೯೯ ಮಂದಿ ಸ್ಟೇ॥ ಮಾಸ್ಟರರು ಭಾಗವಹಿಸುವರಂತೆ.

## ಮದ್ರಾಸ್ ಆಧಿಪತ್ಯಕ್ಕೆ ಮಿಲ್ ಬಟ್ಟೆ ಸಾಲದು

ಮದ್ರಾಸ್ ಎಸೆಂಬ್ಲಿಯಲ್ಲಿ ಪ್ರಧಾನ ಶ್ರೀ ಟಿ. ಪ್ರಕಾಶಂ ಅವರು ಕೊಟ್ಟ ಹೇಳಿಕೆಯ ಮೇರೆಗೆ—ಪ್ರಾಂತದಲ್ಲಿ ಒಟ್ಟು ಇರುವ ಜನಸಂಖ್ಯೆ ೫೩೦ ಲಕ್ಷ; ಇವರಲ್ಲಿ ೧೨ ವರ್ಷದೊಳಗಿನವರು ೧೬೦ ಲಕ್ಷ ಮಂದಿ. ಇವರಲ್ಲಿ ದೊಡ್ಡವರಿಗೆ ಈಗ ದೊರೆಯುತ್ತಿರುವ ಸರಾಸರಿ ಬಟ್ಟೆ ಸುಮಾರು ೫ ಗಜ; ೧೨ ವರ್ಷದೊಳಗಿನವರಿಗೆ ಈಗ ಸಿಕ್ಕುವ ಸರಾಸರಿ ಬಟ್ಟೆ ಸುಮಾರು ೨ ಗಜ ಇದು ಕೆಟ್ಟ ಸ್ಥಿತಿ. ಸದ್ಯ ಮದ್ರಾಸ್ ಆಧಿಪತ್ಯ, ಹುಡುಗಿಯರು ಸೀರೆಗಳಿಗಾಗಿ ಬೊಂಬಯಿ ಪ್ರಾಂತದ ಮೋರೆಯನ್ನೇ ನೋಡುತ್ತ ಕುಳ್ಳಿರಬೇಕಾಗಿದೆ. ಇದು ಶೋಚನೀಯ ಸ್ಥಿತಿಯೇ. ಹೇಗೂ ಹಿಂದು ಸ್ಥಾನಕ್ಕೆ ಬಟ್ಟೆ ಸರಾಸರಿ ೧೪ ಗಜವಿದ್ದರೆ, ಮದ್ರಾಸ್ ಆಧಿಪತ್ಯಕ್ಕೆ ಸರಾಸರಿ ೧೨ ಗಜ ಬಟ್ಟೆ ಸಾಕೆಂದು ಮಾಡಿಟ್ಟಿದ್ದಾರೆ. ಪ್ರಕೃತ ಅಸ್ಫೃಷ್ಟಿ ಸಿಕ್ಕದ ದುರ್ಗತಿ ನಮ್ಮದು

## ರಾಜಕೀಯ ಬಂದಿಗಳ ಬಿಡುಗಡೆ

ಬಂಗಾಳದಲ್ಲಿರುವ ಯಾವತ್ತು ರಾಜಕೀಯ ಬಂದಿಗಳನ್ನೂ ಬೇಗನೇ ಬಿಡುಗಡೆ ಮಾಡುವ ವಿಚಾರದಲ್ಲಿ ಬಂಗಾಳ ಸರಕಾರವು ಪರ್ಯಾಲೋಚಿಸುತ್ತಿರುವುದಾಗಿ ಅಲ್ಲಿನ ಪ್ರಧಾನರು ಪ್ರಕಟಿಸಿರುವರು.

## ಮಿ. ಲೂಯಿ ಫಿಶರರ ಭಾರತದ ಸಂದರ್ಶನ

ಪ್ರಸಿದ್ಧ ಗ್ರಂಥಕರ್ತರೂ ಪತ್ರಿಕೋದ್ಯೋಗಿಗಳೂ ಆಗಿರುವ ಮಿ. ಲೂಯಿ ಫಿಶರರು ಇದೇ ತಿಂಗಳ ತಾ. ೨೦ರ ಸುಮಾರಿಗೆ ಅಮೆರಿಕದಿಂದ ಇಲ್ಲಿಗೆ–ಇಂಡಿಯಕ್ಕೆ–ಬರುವರೆಂದು ತಿಳಿದುಬಂದಿದೆ.

## ವೈಸರಾಯರ ನಿವೃತ್ತ ಕೌನ್ಸಿಲರರು

ವೈಸರಾಯರ ಏ॥ ಕೌನ್ಸಿಲಿನ ಇಬ್ಬರು ಸದಸ್ಯರಾದ ಸರ್ ಆರ್ಚಿಬಾಲ್ಡ್ ರವ್ ಲ್ಯಾಂಡ್ಸ್‌ರವರೂ ಸರ್ ಝಾನ್ ಥೋರ್ನ್ ಅವರೂ ತಮ್ಮ ಉದ್ಯೋಗಗಳಿಗೆ ರಾಜಿ ಕೊಟ್ಟು ಸ್ವದೇಶದ ಕಡೆ ತಿರುಗಿದ್ದಾರೆ.

## ಬ್ರಿಟಿಶ್ ನಿಯೋಗ ಗೋಷ್ಠಿಯ ಸೂಚನೆ

## ಲೀಗ್ ಕಾ॥ ಮಂಡಲದ ವೋಟಿಂಗ್

ಎಂ. ಜಿನ್ನಾ ಅವರು ಕಳೆದ ತಾ. ೩ರಲ್ಲಿ ಹೊಸ ಡಿಲ್ಲಿಯಲ್ಲಿ ಎರಡು ಸಲ ವೈಸರಾಯರ ಭೇಟಿ ಮಾಡಿ ಮಾತಾಡಿದರು. ಈ ವಿಷಯದಲ್ಲಿ ಅನಧಿಕಾರಿ ವರದಿಗಳು ಅಲ್ಪಸ್ವಲ್ಪವಾಗಿ ಪ್ರಕಟಗೊಂಡಿದೆ.

ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿಯ ಅಶಾಸ್ತ್ರೀಯವಾದ ವೋಟಿಂಗುಗಳು ಹೊಸ ಡಿಲ್ಲಿಯಲ್ಲಿ ಮಿ. ಎಂ. ಎ. ಜಿನ್ನರ ವರ ಅಧ್ಯಕ್ಷತೆಯಲ್ಲಿ ಕಳೆದ ಜೂನ್ ತಾ. ೩—೪ರಲ್ಲಿ ನಡೆದಿದೆ. ಅಲ್ಲಿ ನಡೆದ ಚರ್ಚೆಗಳೇನೆಂಬ ಸಮಗ್ರ ವಿಚಾರ ಬೇಗನೇ ಹೊರ ಬರಲಿದೆ. ಈ ವಿಚಾರದಲ್ಲಿ ಲೀಗಿನ ಪತ್ರಿಕೆಯಾದ "ಡಾನ್" ಕೆಲವೊಂದು ಸಮಾಚಾರಗಳನ್ನು ಕೊಟ್ಟಿರುವುದಲ್ಲದೆ—ಲೀಗಿನವರು ಭಾರತದ ಸ್ವಾತಂತ್ರ್ಯವೇ ಮೊದಲಾದ ದೊಡ್ಡ ದೊಡ್ಡ ಸಂಗತಿಗಳ ಕುರಿತು ಪರ್ಯಾಲೋಚಿಸುತ್ತಿರುವರೆಂದೂ ಪ್ರಕಟವಾಗಿದೆ.

## ಭಾರತಕ್ಕೆ ಅನ್ನ ಸಾಮಗ್ರಿಗಳು

ಕಳೆದ ಮೇ ತಿಂಗಳಲ್ಲಿ ಇಂಡಿಯಕ್ಕೆ ವಿದೇಶಗಳಿಂದ ೨೩೫,೦೦೦ ಟನ್ ಆಹಾರ ಸಾಧನಗಳು ಬಂದಿತ್ತು; ಈ ತಿಂಗಳಿಗಾಗಿ ಸುಮಾರು ೨೦೦,೦೦೦ ಟನ್ ಆಹಾರ ಸಾಮಗ್ರಿ (ಧಾನ್ಯ)ಗಳೂ ಅಲ್ಲದೆ ಲಂ ಸಾವಿರ ಟನ್ ಅಕ್ಕಿಯೂ ಈ ತಿಂಗಳಲ್ಲಿ ಬರಲಿದೆ ಎಂದು "ಕಾಮನ್ಸ್" ಸಭಾ ಮಂದಿರದ ಪ್ರಶ್ನೋತ್ತರಗಳಿಂದ ತಿಳಿದುಬರುತ್ತಿದೆ. ಆದರೆ, ಹಿಂದುಸ್ಥಾನಕ್ಕೆ ಅಗತ್ಯವಿರುವ ಅನ್ನಸಾಧನಗಳಲ್ಲಿ ಎಷ್ಟು ಕಡಿಮೆ ಬೀಳುತ್ತಿದೆ ಎಂಬುದರ ಅಂದಾಜು ಇನ್ನೂ ಸರಿಯಾಗಿ ತಿಳಿದುಬಂದಿಲ್ಲ.

——


# ವ್ಯರ್ಥ ಮಾಡಬೇಡಿರಿ

ಬಟ್ಟೆಗಳು ಅಮೂಲ್ಯವಾಗಿರುವ ಈ ಸಮಯದಲ್ಲಿ ೫೦೧ ಸಾಬೂನನ್ನು ಉಪಯೋಗಿಸಿ ಜಾಗ್ರತೆಯಾಗಿ ನಿಮ್ಮ ಬಟ್ಟೆಗಳನ್ನು ಒಗೆದು ಅವುಗಳನ್ನು ಹೆಚ್ಚು ಕಾಲ ಬಾಳಿಕೆ ಬರುವಂತೆ ಮಾಡಿರಿ. ಆದರೆ ಸಾಬೂನನ್ನು ವ್ಯರ್ಥ ಮಾಡಬೇಡಿರಿ. ಕೊಳೆ ಹೋಗುವುದಕ್ಕೆ ಬೇಕಾಗುವಷ್ಟು ಮಾತ್ರ ಉಪಯೋಗಿಸಿ. ಹೀಗೆ ಮಾಡುವುದರಿಂದ ಸಾಬೂನೂ ಉಳಿಯುವುದು. ಬಟ್ಟೆಗಳೂ ಬಾಳಿಕೆ ಬರುವವು.




# ೫೦೧ ಸಾಬೂನುಗಳು

ದಿ ತಾ ತಾ ಆಯಿಲ್ ಮಿಲ್ಸ್ ಕಂಪೆನಿ ಲಿಮಿಟೆಡ್.


Printed & Published by M. Baburaya Prabhu, B. A., at the Mangalore Press, Car-Street, Mangalore. Editor: Hurli Bhima Rao